# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಬಿ. ಜಿ. ಪಾಟೀಲ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **508 (568)**

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : **11–03–2025**

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪನೆಯಾಗಲಿರುವ ಜವಳಿ ಪಾರ್ಕ್‌ಗೆ ತಗಲಿದ ವೆಚ್ಚವೆಷ್ಟು; ಹಾಗೂ ಕೇಂದ್ರ ರಾಜ್ಯ ಸರ್ಕಾರಗಳಿಂದ ಈ ಜವಳಿ ಪಾರ್ಕ್ ಸ್ಥಾಪನೆಗೆ ವಿವಿಧ ರೂಪದಲ್ಲಿ ದೊರೆಯುತ್ತಿರುವ ನೆರವು ಎಷ್ಟು; ಪ್ರಸ್ತುತ ಜವಳಿ ಪಾರ್ಕ್‌ನ ಸ್ಥಿತಿಗತಿಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕಲಬುರ್ಗಿ ಜಿಲ್ಲೆ, ನದಿಸಿನ್ನೂರ, ಫಿರೋಜಾಬಾದ್ ಮತ್ತು ಕಿರಣಗಿ ಗ್ರಾಮದಲ್ಲಿ ಪಿಎಂ–ಮಿತ್ರ ಮೆಗಾ ಜವಳಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಜವಳಿ ಇಲಾಖೆಯ ಸ್ವಾಧೀನದಲ್ಲಿರುವ ಒಟ್ಟು 1000 ಎಕರೆ ಜಮೀನನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಪಾರ್ಕ್ ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ.<br><br>ದಿನಾಂಕ:17.09.2024 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ PM-MITRA Park ಗೇಟ್‌ವರೆಗೆ ರಾಷ್ಟ್ರೀಯ ಹೆದ್ದಾರಿಯಿಂದ 1.43 ಕಿ.ಮೀ ಜೋಡಿ ರಸ್ತೆ, 3.63 MLD ನೀರು ಹರಿಸಲು ಮದ್ರಿ ಗ್ರಾಮದ ಬಳಿ ಅಣೆಕಟ್ಟು ನಿರ್ಮಾಣ, ನಂದಿಕೂರು ಗ್ರಾಮದಿಂದ ಪೈಪ್‌ಲೈನ್ ಅಳವಡಿಕೆ ಹಾಗೂ 180 ಮೆಗಾ ವ್ಯಾಟ್ಸ್ ವಿದ್ಯುತ್ ಸರಬರಾಜು ಮಾಡಲು ಪವರ್ ಸ್ಟೇಷನ್ ನಿರ್ಮಾಣ ಈ ಮೂಲಭೂತ ಸೌಕರ್ಯ ಒದಗಿಸಲು ರೂ.390.2681 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಸರ್ಕಾರ ಆದೇಶವನ್ನು ಹೊರಡಿಸಲಾಗಿದೆ.<br><br>ಪಿಪಿಪಿ ಮಾದರಿಯಲ್ಲಿ ಪಾರ್ಕ್ ಸ್ಥಾಪಿಸಲು Master Developer ನೇಮಕವಾದ ನಂತರ ಪಾರ್ಕ್ ಅಭಿವೃದ್ಧಿ ಪಡಿಸಲು ಪ್ರಗತಿಯನ್ನಾಧರಿಸಿ ಕೇಂದ್ರ ಸರ್ಕಾರವು ಮೊದಲನೇ ಹಂತದಲ್ಲಿ ರೂ.300.00 ಕೋಟಿ ಹಾಗೂ ಎರಡನೇ ಹಂತದಲ್ಲಿ ರೂ.200.00 ಕೋಟಿ ಹೀಗೆ ಒಟ್ಟು ರೂ.500.00 ಕೋಟಿಗಳನ್ನು ಒದಗಿಸಲಿದೆ.<br><br>ಪ್ರಸ್ತುತ ಜವಳಿ ಪಾರ್ಕ್‌ನ ಪ್ರಗತಿಯ ವಿವರಗಳನ್ನು ಅನುಬಂಧ ದಲ್ಲಿ ಒದಗಿಸಿದೆ. |

| | | |
|---|---|---|
| ಆ) | ಜವಳಿ ಪಾರ್ಕ್ ಸ್ಥಾಪನೆಯಿಂದ ಸೃಜನೆಗೊಂಡಿರುವ ಉದ್ಯೋಗಗಳೆಷ್ಟು; ಕೈಮಗ್ಗ ಮತ್ತು ಜವಳಿ ಕ್ಷೇತ್ರಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ನೇಕಾರರಿದ್ದು, ಈ ಜನರಿಗೆ ವಿಶೇಷ ತರಬೇತಿ ನೀಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಅಥವಾ ಉದ್ಯೋಗ ದೊರಕಿಸಿ ಕೊಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯೋಜಿಸಿರುವ ಯೋಜನೆಗಳು ಯಾವುವು; | ಈ ಜವಳಿ ಪಾರ್ಕ್ ಸ್ಥಾಪನೆಯಿಂದ ರಾಜ್ಯದಲ್ಲಿ ನೇರವಾಗಿ ಒಂದು ಲಕ್ಷ ಉದ್ಯೋಗ ಹಾಗೂ ಪರೋಕ್ಷವಾಗಿ ಎರಡು ಲಕ್ಷ ಉದ್ಯೋಗ ಸೃಜನೆಯಾಗುವ ನಿರೀಕ್ಷೆಯಿದೆ.<br><br>ಜವಳಿ ಪಾರ್ಕ್ ಸ್ಥಾಪನೆ ಯೋಜನೆಯಡಿ ಯಾವುದೇ ತರಬೇತಿ ನೀಡುವ ಕಾರ್ಯಕ್ರಮಗಳಿರುವುದಿಲ್ಲ. ಆದರೆ ರಾಜ್ಯ ಸರ್ಕಾರದ ಜವಳಿ ನೀತಿಯಡಿ ಸೀವಿಂಗ್ ಮಿಷನ್ ಆಪರೇಟರ್ ಕೋರ್ಸ್/ ಕೈಮಗ್ಗ ನೇಯ್ಗೆ/ ವಿದ್ಯುತ್ ಮಗ್ಗ ನೇಯ್ಗೆ ತರಬೇತಿ ನೀಡಲು ಅವಕಾಶವಿರುತ್ತದೆ.<br><br>ಕೇಂದ್ರ ಸರ್ಕಾರದಿಂದ ಸಮರ್ಥ್ ಯೋಜನೆಯಡಿ ಸೀವಿಂಗ್ ಮಿಷನ್ ಆಪರೇಟರ್ ಕೋರ್ಸ್ ತರಬೇತಿ ನೀಡಲು ಅವಕಾಶವಿರುತ್ತದೆ. |
| ಇ) | ಈ ಯೋಜನೆಗಳ ಅಡಿಯಲ್ಲಿ ಇದುವರೆವಿಗೂ ಒದಗಿಸಿರುವ ವಿವಿಧ ತರಬೇತಿಗಳು ಯಾವುವು? | ಪಿಎಂ ಮಿತ್ರ ಪಾರ್ಕ್ ಯೋಜನೆಯಡಿ ತರಬೇತಿ ನೀಡುವ ಕಾರ್ಯಕ್ರಮ ಇರುವುದಿಲ್ಲ. |

**ಸಂಖ್ಯೆ: CI 28 JAKE 2025**

(ಶಿವಾನಂದ ಎಸ್. ಪಾಟೀಲ)

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

| ಕ್ರ. ಸಂ. | ಕಾಮಗಾರಿ | ಅಂದಾಜು ಮೊತ್ತ | ವಿವರ |
|---|---|---|---|
| 1 | ಪಿಎಂ ಮಿತ್ರ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ 1.43 ಕಿ.ಮೀ ಉದ್ದದ ವಿಭಾಜಕದೊಂದಿಗೆ ಜೋಡಿ ರಸ್ತೆ ನಿರ್ಮಾಣಕ್ಕೆ | 9.98 | ಪಿಎಂ ಮಿತ್ರ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ 1.43 ಕಿ.ಮೀ ಉದ್ದದ ವಿಭಜಕದೊಂದಿಗೆ ಜೋಡಿ ರಸ್ತೆ ನಿರ್ಮಾಣಕ್ಕಾಗಿ ರೂ.9.98 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. |
| 2 | ಜೋಡಿ ರಸ್ತೆ ಎರಡೂ ಬದಿ ಕಾಂಕ್ರೀಟ್ ಚರಂಡಿ ನಿರ್ಮಾಣಕ್ಕೆ | 3.50<br><br>ಕೆ.ಕೆ.ಆರ್.ಡಿ.ಬಿ ಮೈಕ್ರೊ ಪೈನಾನ್ಸ್ ಅಡಿಯಲ್ಲಿ | ಜೋಡಿ ರಸ್ತೆ ಎರಡೂ ಬದಿ ಕಾಂಕ್ರೀಟ್ ಚರಂಡಿ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. |
| 3 | ಜವಳಿ ಪಾರ್ಕ್‌ಗೆ 3.63 MLD ನೀರು ಹರಿಸಲು ಜೇವರ್ಗಿ ತಾಲ್ಲೂಕಿನ ಮದ್ರಿ ಬಳಿ ಅಣೆಕಟ್ಟು ನಿರ್ಮಿಸಲು | 35.00 | ಪಿಎಂ ಮಿತ್ರ ಜವಳಿ ಪಾರ್ಕ್‌ಗೆ 3.63 MLD ನೀರು ಹರಿಸಲು ಜೇವರ್ಗಿ ತಾಲ್ಲೂಕಿನ ಮದ್ರಿ ಬಳಿ ಅಣೆಕಟ್ಟನ್ನು ರೂ.35.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. |
| 4 | ಜವಳಿ ಪಾರ್ಕ್‌ಗೆ ಕೈಗಾರಿಕಾ ಉದ್ದೇಶಕ್ಕಾಗಿ 12.09 MLD ನೀರನ್ನು ನಂದಿಕೂರು ಗ್ರಾಮದ Sewage Treatment Plan(STP) ಯಿಂದ ನೀರು ಸರಬರಾಜು ಮಾಡಲು | 116.00 | ಜವಳಿ ಪಾರ್ಕ್‌ಗೆ ಕೈಗಾರಿಕಾ ಉದ್ದೇಶಕ್ಕಾಗಿ 12.09 MLD ನೀರನ್ನು ನಂದಿಕೂರು ಗ್ರಾಮದ Sewage Treatment Plan(STP) ಯಿಂದ ನೀರು ಸರಬರಾಜು ಮಾಡಲು ಈಗಾಗಲೇ ಸರ್ವೆಯನ್ನು ಪೂರ್ಣಗೊಳಿಸಿದ್ದು, ಪೈಪ್‌ಲೈನ್ ಡಿಸೈನ್ ಮಾಡುವುದರಲ್ಲಿ ಕ್ರಮವಹಿಸಲಾಗುತ್ತಿದೆ. |
| 5 | ಜವಳಿ ಪಾರ್ಕ್‌ಗೆ 180 MW ವಿದ್ಯುತ್ ಸರಬರಾಜು ಮಾಡಲು | 229.288 | ಜವಳಿ ಪಾರ್ಕ್‌ಗೆ 180 MW ವಿದ್ಯುತ್ ಸರಬರಾಜು ಮಾಡಲು ಪವರ್ ಸ್ಟೇಷನ್ ನಿರ್ಮಾಣಕ್ಕಾಗಿ ಸರ್ವೆ ನಡೆಸಲು ಕ್ರಮ ವಹಿಸಲಾಗುತ್ತಿದೆ. |
| | **ಒಟ್ಟು** | **393.768** | |

K. Jyothi 5/3/24

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ